ಎಂದು ವಿಚಾರಿಸತೊಡಗಿದರು. 'ಏನಿಲ್ಲ... ಮೈನರ್...' ಎಂದ ಡ್ರೈವರ್, ಕಂಡಕ್ಟರ್ ಇಬ್ಬರೂ ಬಸ್‌ನಿಂದ ಕೆಳಗೆ ಇಳಿದರು. ಬಸ್‌ನ ಡ್ರೈವರ್ ಬಸ್‌ನ ಹಿಂದೆ ಮುಂದೆ ಒಂದೆರಡು ಸುತ್ತು ಹಾಕಿ ಬಂದ. ಬ್ಯಾನೆಟ್ ಬಾಗಿಲು ತೆರೆದ; ಮುಚ್ಚಿದ.

ಕುಳಿತೂ ಕುಳಿತು ಕಾಲು ಜೋಮು ಹಿಡಿದಿದ್ದ ಕೆಲವರು ಬಸ್‌ನಿಂದ ಕೆಳಗೆ ಇಳಿದರು. ಮತ್ತೆ ಕೆಲವರು ಮೂತ್ರ ವಿಸರ್ಜನೆಗಾಗಿ, ಮತ್ತೆ ಕೆಲವರು ಸಿಗರೇಟ್ ಸೇದಲೋ, ಬೀಡಿ ಸೇದಲೋ ಇದೇ ಸಮಯವೆಂದು ಕೆಳಗೆ ಇಳಿದರು. ಕುಳಿತಿದ್ದ ನಾನು ಮೇಲೆದ್ದೆ. ಬಸ್‌ನಿಂದ ಕೆಳಗೆ ಇಳಿದೆ. ರಸ್ತೆಯ ಆಚೆ ಬದಿ ಹೋದೆ. ಜಲಬಾಧೆ ತೀರಿಸಿಕೊಂಡೆ. ಚುಮುಚುಮು ಬೆಳಗಾಗುತ್ತಿತ್ತು. ಸುತ್ತಲೂ ಒಮ್ಮೆ ದೃಷ್ಟಿ ಹರಿಸಿದೆ. ಬೀದಿ ದೀಪಗಳು ಮಿಣಿ ಮಿಣಿ ಉರಿಯುತ್ತಿದ್ದವು. ಮೂರ್ನಾಲ್ಕು ಕಂತ್ರಿ ನಾಯಿಗಳು ಅಲ್ಲಲ್ಲಿ ಮಲಗಿದ್ದವು. ಅಲ್ಲಲ್ಲಿ ಕಸದ ಗುಪ್ಪೆ. ನಾನು ನಿಂತದ್ದು ರಸ್ತೆಯ ಎಡಬದಿ. ಮುಖ್ಯ ರಸ್ತೆಯಿಂದ ಈ ಎಡಬದಿಯತ್ತ ಒಂದು ರಸ್ತೆ. ಅದು ಅಷ್ಟೇನೂ ಅಗಲವಾದ ರಸ್ತೆ ಆಗಿರಲಿಲ್ಲ. ಆದರೆ ಟಾರು ಹಾಕಿದ್ದ ರಸ್ತೆ. ಮುಖ್ಯ ರಸ್ತೆ ಹಾಗೂ ಈ ಎಡಬದಿಯ ರಸ್ತೆ ಕೂಡುವಲ್ಲಿ ಒಂದು ಬೋರ್ಡ್: 'ತ್ಯಾಮಗೊಂಡ್ಲು – 26 ಕಿ.ಮೀ.'

ನನಗೆ ನೆನಪಾಗತೊಡಗಿತು: ಆಂಜನೇಯಪ್ಪ ಮೇಷ್ಟ್ರು... ನಾನು ಸಾಗರದ ಮುನಿಸಿಪಲ್ ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ನನಗೆ ಜಿಯಾಗ್ರಫಿ ಕಲಿಸಿದ್ದ ಆಂಜನೇಯಪ್ಪ ಮೇಷ್ಟ್ರು ಇದೇ ತ್ಯಾಮಗೊಂಡ್ಲು ಊರಿನವರು. ಹಾಗಂತ ಅವರೇ ಹೇಳಿಕೊಂಡಿದ್ದರು: 'ತುಮಕೂರಿನಿಂದ ಇಪ್ಪತ್ತು ಇಪ್ಪತ್ತೈದು ಕಿಲೋಮೀಟರ್ ದೂರದಲ್ಲಿ ನಮ್ಮ ಊರು. ತ್ಯಾಮಗೊಂಡ್ಲು ಅಂತ. ಅಲ್ಲಿ ನಮಗೆ ಸ್ವಲ್ಪ ಜಮೀನು ಇದೆ. ನನ್ನ ತಮ್ಮ ಶರಣಪ್ಪ ಅದನ್ನು ನೋಡಿಕೊಳ್ಳುತ್ತಿದ್ದಾನೆ. ಊರಿನ ತುಸು ಆಚೆ ತುದಿ ವಾಸವೀ ಕನ್ನಿಕಾ ದೇವಿಯ ದೇವಸ್ಥಾನ ಉಂಟು. ಅದರಿಂದ ಹತ್ತು ಮಾರು ಆಚೆ ನಮ್ಮ ಮನೆ. ಮುತ್ತಜ್ಜನ ಕಾಲದ ಮನೆ. ರಜೆ ದಿನಗಳಲ್ಲಿ ನಾವು ಅಲ್ಲಿಗೆ ಹೋಗಿ ಬರುತ್ತಿರುತ್ತೇವೆ.'

ಆಂಜನೇಯಪ್ಪ ಮೇಷ್ಟ್ರು ತುಸು ಎತ್ತರದ ಕಪ್ಪನೆಯ ವ್ಯಕ್ತಿ. ಅವರಿಗೆ ತುಸು ಉಗ್ಗು. ಆದರೂ ತುಂಬಾ ಚೆನ್ನಾಗಿ ಕಲಿಸುತ್ತಿದ್ದರು. ಅವರು ನಮಗೆ ಪಾಠ ಮಾಡುತ್ತಿದ್ದರೆ ಸ್ವತಃ ನಾವೇ ಅವರು ಹೇಳುತ್ತಿದ್ದ ಪರ್ವತ, ಪ್ರಸ್ಥಭೂಮಿ, ಮರಳುಗಾಡು, ನದಿ, ತೊರೆಗಳ ಬಳಿ ಹೋಗಿ ಬಂದಂತೆ ಆಗುತ್ತಿತ್ತು. ಆಂಜನೇಯಪ್ಪ ಮೇಷ್ಟ್ರು ಸಾಗರದ ಕೊಂಕಣಿ ಬೇಣದಲ್ಲಿ, ರೈಲ್ವೇ ಹಳಿಯ ಆಚೆ ನಾಲ್ಕು ಮನೆಗಳ ನಂತರದ ಒಂದು ಮನೆಯಲ್ಲಿ ಬಾಡಿಗೆಗಿದ್ದರು. ಆ ಮನೆಯ ಎದುರೇ ಒಂದು ಕೋಣೆಯಲ್ಲಿ ನಾನೂ ಬಾಡಿಗೆಗಿದ್ದೆ. ನನ್ನ ಊಟ, ತಿಂಡಿ, ಸ್ನಾನ ಬಿ.ಎಚ್. ರಸ್ತೆಯ ಪಕ್ಕದಲ್ಲಿದ್ದ ಬ್ರಾಹ್ಮಣರ ಹಾಸ್ಟೆಲ್‌ನಲ್ಲಿ. ಆಂಜನೇಯಪ್ಪ ಮೇಷ್ಟ್ರ ಹೆಂಡತಿ ಶಿವಮ್ಮ. ಈ ದಂಪತಿಗೆ ಮೂವರು ಮಕ್ಕಳು: ಹಿರಿಯವಳು ಹೇಮಾ. ಈಕೆ ನನಗಿಂತ ಒಂದು ಕ್ಲಾಸ್ ಮುಂದಿದ್ದಳು. ಲಂಗ ದಾವಣಿ ತೊಡುತ್ತಿದ್ದಳು. ಉದ್ದನೆಯ ಜಡೆ ಇವಳದು. ಅಗಲವಾದ ಹೊಳಪು ಕಣ್ಣುಗಳು. ತಂದೆಯಂತೆಯೇ ತುಸು ಕಪ್ಪು. ಲಕ್ಷಣವಾಗಿದ್ದಳು. ಮತ್ತಿಬ್ಬರು ಗಂಡು ಮಕ್ಕಳು: ಒಬ್ಬ ಶ್ರೀಕಂಠ. ಇನ್ನೊಬ್ಬ ಶಿವಾನಂದ. ಇವನನ್ನು ಶಿವೂ ಅಂತ ಕರೆಯುತ್ತಿದ್ದರು.

ಸಾಗರದಿಂದ ಆಂಜನೇಯಪ್ಪ ಮೇಷ್ಟ್ರಿಗೆ ಭದ್ರಾವತಿ ನ್ಯೂ ಟೌನ್ ಹೈಸ್ಕೂಲ್‌ಗೆ ವರ್ಗವಾಯಿತು. ನಾನಾಗ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜ್‌ನಲ್ಲಿ ಓದುತ್ತಿದ್ದೆ. ಶಿವಮೊಗ್ಗಾದ ಬಸ್‌ಸ್ಟ್ಯಾಂಡ್‌ನಲ್ಲಿ ಒಮ್ಮೆ ನನಗೆ ಆಂಜನೇಯಪ್ಪ ಮೇಷ್ಟ್ರು ಸಿಕ್ಕಿದ್ದರು. ನನ್ನ ಓದಿನ ಬಗ್ಗೆ ಆಸಕ್ತಿಯಿಂದ ವಿಚಾರಿಸಿಕೊಂಡಿದ್ದರು. ಆನಂತರ ಆಂಜನೇಯಪ್ಪನವರಿಗೆ ಸೊರಬ, ಶಿಕಾರಿಪುರ, ಚಿಕ್ಕಬಳ್ಳಾಪುರ ಅಂತ ಬೇರೆ ಬೇರೆ ಕಡೆ ವರ್ಗವಾಯಿತು. ಮತ್ತೊಮ್ಮೆ ಅರಸೀಕೆರೆಯ ಬಸ್ ನಿಲ್ದಾಣದಲ್ಲಿ ಅವರು ಅವರ ಹೆಂಡತಿ ಮಕ್ಕಳು ನನಗೆ ಭೇಟಿಯಾಗಿದ್ದರು. ಆಗ ಹೇಮಾ ಲಂಗ ದಾವಣಿಯಿಂದ ಸೀರೆ